All India Radio: Bangalore
National Bulletin In Kannada
04.01.2026  7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<>><><*><><<>

ಮುಖ್ಯಾಂಶಗಳು

೧. ಅಂಡಮಾನ್ - ನಿಕೋಬಾರ್‌ನಲ್ಲಿ ಗೃಹ ಸಚಿವಾಲಯದ ಸಂಸದೀಯ ಸಮಾಲೋಚನಾ ಸಮಿತಿ ಸಭೆ; ಕೇಂದ್ರ ಸಚಿವ ಅಮಿತ್ ಶಾ ಅಧ್ಯಕ್ಷತೆ

೨. ಅಮೆರಿಕದ ಬಂಧನದಲ್ಲಿರುವ ವೆನೆಜ್ಯುವೆಲಾ ಅಧ್ಯಕ್ಷರ ವಿರುದ್ಧ ಕಾನೂನು ಪ್ರಕ್ರಿಯೆ ಚುರುಕು; ಅಮೆರಿಕ ಕ್ರಮದ ಬಗ್ಗೆ ಜಾಗತಿಕವಾಗಿ ಮಿಶ್ರ ಪ್ರತಿಕ್ರಿಯೆ; ನಾಳೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ತುರ್ತು ಸಭೆ

೩. ೭೨ನೇ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿ; ವರ್ಚುವಲ್ ಮೂಲಕ ಇಂದು ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

೪. ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್; ಭಾರತದ ಸಿಂಡ್ರೆಲಾ ದಾಸ್ ಮತ್ತು ರೂಪಮ್ ಸರ್ದಾರ್‌ಗೆ ೧೭ವರ್ಷದೊಳಗಿನ ಬಾಲಕಿಯರ ಮತ್ತು ಬಾಲಕರ ಸಿಂಗಲ್ಸ್ ಪ್ರಶಸ್ತಿ

<>><><*><><<>

೨೦೨೯ ರ ವೇಳೆಗೆ ಸೆಷನ್ಸ್ ನ್ಯಾಯಾಲಯದಿಂದ ಸುಪ್ರೀಂ ಕೋರ್ಟ್‌ಗೆ ಮೂರು ಹೊಸ ಕ್ರಿಮಿನಲ್ ಕಾನೂನುಗಳು ಕಾಲಮಿತಿಯ ನ್ಯಾಯವನ್ನು ಖಚಿತಪಡಿಸುತ್ತವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಶ್ರೀ ವಿಜಯ ಪುರಂನಲ್ಲಿ ನಿನ್ನೆ ಗೃಹ ಸಚಿವಾಲಯದ ಸಂಸದೀಯ ಸಮಾಲೋಚನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೊಸ ಕ್ರಿಮಿನಲ್ ಕಾನೂನುಗಳು ತನಿಖೆಗಳನ್ನು ವೇಗಗೊಳಿಸುತ್ತಿವೆ ಮತ್ತು ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸುತ್ತಿವೆ ಎಂದು ಹೇಳಿದರು.೨೦೧೯ ರಿಂದ ಗೃಹ ಸಚಿವಾಲಯವು, ಸಂಸದೀಯ ಸಮಾಲೋಚನಾ ಸಮಿತಿಯ ೧೨ ಸಭೆಗಳನ್ನು ನಡೆಸಿದೆ. ಅದು ಸಕಾರಾತ್ಮಕ ಫಲಿತಾಂಶಗಳನ್ನು ನೀಡಿದೆ. ೨೦೨೧ ರಲ್ಲಿ ದೇಶದಲ್ಲಿ ಯಾವುದೇ ಸಂಚಾರಿ ವಿಧಿವಿಜ್ಞಾನ ಪ್ರಯೋಗಾಲಯಗಳಿರಲಿಲ್ಲ ಆದರೆ ಇಂದು ಅವುಗಳ ಸಂಖ್ಯೆ ೧ ಸಾವಿರ ತಲುಪಿದೆ. ದೇಶಾದ್ಯಂತ ವಿಧಿವಿಜ್ಞಾನ ಪ್ರಯೋಗಾಲಯಗಳ ಜಾಲವನ್ನು ಸ್ಥಾಪಿಸಲು ಮುಂದಿನ ಐದು ವರ್ಷಗಳಲ್ಲಿ ೩೦ ಸಾವಿರ ಕೋಟಿ ರೂಪಾಯಿಗಳ ಹೂಡಿಕೆ ಮಾಡಲಾಗುವುದು ಎಂದು ಅವರು ಉಲ್ಲೇಖಿಸಿದ್ದಾರೆ. ೨೦೨೯ ರ ವೇಳೆಗೆ ದೇಶದ ಪ್ರತಿಯೊಂದು ರಾಜ್ಯವು, ವಿಧಿವಿಜ್ಞಾನ ವಿಶ್ವವಿದ್ಯಾಲಯ ಅಥವಾ ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯವನ್ನು ಹೊಂದಿರಲಿದೆ ಎಂದು ಸಚಿವರು ತಿಳಿಸಿದರು.

<>><><*><><<>

ತಮಿಳುನಾಡಿನಲ್ಲಿ ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆಯಲಿರುವ ಭಾರತೀಯ ಜನತಾ ಪಕ್ಷದ ಸಮಾರೋಪ ಸಾರ್ವಜನಿಕ ರ್‍ಯಾಲಿಗೆ ಭದ್ರತಾ ವ್ಯವಸ್ಥೆಗಳನ್ನು ಗಮನಾರ್ಹವಾಗಿ ಬಲಪಡಿಸಲಾಗಿದೆ. ತಮಿಳುನಾಡು ಬಿಜೆಪಿ ನಾಯಕ ನೈನಾರ್ ನಾಗೇಂದ್ರನ್ ನೇತೃತ್ವದಲ್ಲಿ ಪುದುಕ್ಕೊಟ್ಟೈನ ತಿರುಕೋಕರ್ಣಂನಲ್ಲಿರುವ ಬಾಲನ್ ನಗರ ಬಳಿಯ ಪಲ್ಲತಿವಯಲ್ ಪ್ರದೇಶದಲ್ಲಿ ಸಂಜೆ ೫ ಗಂಟೆಗೆ ಸಭೆ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

<>><><*><><<>

ಅಮೆರಿಕದ ಸಶಸ್ತ್ರ ಪಡೆಗಳಿಂದ ಬಂಧನಕ್ಕೊಳಗಾಗಿರುವ ವೆನೆಜ್ಯುವೆಲಾ ಅಧ್ಯಕ್ಷ ನಿಕೋಲಸ್ ಮಡುರೋ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರೆಸ್ ಅವರಿಗೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆಗಳು ಚುರುಕುಗೊಂಡಿವೆ. ಅಮೆರಿಕದ ಅಟಾರ್ನಿ ಜನರಲ್ ನೀಡಿರುವ ಮಾಹಿತಿಯಂತೆ ಮಡುರೋ ದಂಪತಿಯನ್ನು ನ್ಯೂಯಾರ್ಕ್‌ನ ಸದರ್ನ್ ಡಿಸ್ಟ್ರಿಕ್ಟ್‌ನಲ್ಲಿ ವಿಚಾರಣೆಗೊಳಪಡಿಸಲಾಗಿದೆ. ವೆನೆಜ್ಯುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಮತ್ತು ಅವರ ಪತ್ನಿಯ ಮೇಲೆ ನಾರ್ಕೋ-ಟೆರರಿಸಂ ಮತ್ತು ಅಮೆರಿಕದ ವಿರುದ್ಧ ವಿಧ್ವಂಸಕ ಕೃತ್ಯಗಳ ಸಂಚು ರೂಪಿಸಿದ ಆರೋಪ ಹೊರಿಸಲಾಗಿದೆ. ವೆನೆಜುವೆಲಾದಲ್ಲಿ ಸುಸ್ಥಿರ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಅಮೆರಿಕವು ತಾತ್ಕಾಲಿಕವಾಗಿ ಅಲ್ಲಿನ ಆಡಳಿತವನ್ನು ನಡೆಸಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅಮೆರಿಕದ ಈ ಕ್ರಮಕ್ಕೆ ವಿಶ್ವದಾದ್ಯಂತ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ರಷ್ಯಾ, ಚೀನಾ, ಇರಾನ್, ಬ್ರೆಜಿಲ್ ಮತ್ತು ಕ್ಯೂಬಾ ದೇಶಗಳು ಈ ಕ್ರಮವನ್ನು ತೀವ್ರವಾಗಿ ಖಂಡಿಸಿವೆ. ಇದು ವೆನೆಜುವೆಲಾದ ಸಾರ್ವಭೌಮತ್ವದ ಉಲ್ಲಂಘನೆ ಮತ್ತು ಅಂತರಾಷ್ಟ್ರೀಯ ಕಾನೂನುಗಳ ನೇರ ಉಲ್ಲಂಘನೆ ಎಂದು ರಷ್ಯಾ ಮತ್ತು ಚೀನಾ ದೂರಿವೆ.  ಐರೋಪ್ಯ ಒಕ್ಕೂಟ, ಬ್ರಿಟನ್ ಮತ್ತು ಸ್ಪೇನ್ ನಾಯಕರು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ತಿಳಿಸಿದ್ದು, ಶಾಂತಿ ಮತ್ತು ಅಂತಾರಾಷ್ಟ್ರೀಯ ನಿಯಮಗಳ ಪಾಲನೆಗೆ ಒತ್ತು ನೀಡಿದ್ದಾರೆ.  ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತೆ ಮಾರಿಯಾ ಕೊರಿನಾ ಮಚಾಡೊ ಇದನ್ನು 'ಸ್ವಾತಂತ್ರ್ಯದ ಕ್ಷಣ' ಎಂದು ಬಣ್ಣಿಸಿದ್ದಾರೆ. ಮಡುರೊ ಅವರ ದೌರ್ಜನ್ಯದಿಂದ ದೇಶಕ್ಕೆ ಮುಕ್ತಿ ಸಿಕ್ಕಿದೆ ಎಂದು ಅವರು ತಿಳಿಸಿದ್ದಾರೆ.  ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಈ ಬೆಳವಣಿಗೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಅಂತಾರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ಚಾರ್ಟರ್ ಅನ್ನು ಗೌರವಿಸದಿರುವುದು ಕಳವಳದ ಸಂಗತಿಯಾಗಿದೆ ಎಂದು ಅವರು ಎಚ್ಚರಿಸಿದ್ದಾರೆ. ಈ ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಾಳೆ ತುರ್ತು ಸಭೆಯನ್ನು ಕರೆದಿದೆ.  ವೆನೆಜುವೆಲಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ

ಹಿನ್ನೆಲೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತನ್ನ ನಾಗರಿಕರಿಗೆ ತುರ್ತು ಸಲಹೆಯನ್ನು ನೀಡಿದೆ. ಭಾರತೀಯರು ವೆನೆಜುವೆಲಾಗೆ ಅನಗತ್ಯ ಪ್ರಯಾಣ ಮಾಡದಿರಲು ಸಲಹೆ ನೀಡಿದ್ದು, ಈಗಾಗಲೇ ಅಲ್ಲಿರುವವರು ಕಾರಾಕಾಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಬೇಕು ಎಂದು ಸೂಚಿಸಲಾಗಿದೆ. ಕಚೇರಿಯೊಂದಿಗೆ ಸಂಪರ್ಕ ಸಾಧಿಸಲು ತುರ್ತು ದೂರವಾಣಿ ಸಂಖ್ಯೆ: +೫೮-೪೧೨-೯೫೮೪೨೮೮ ಬಳಸಲು ಕೋರಲಾಗಿದೆ.

<>><><*><><<>

ಮಾರಿಷಸ್ ಅಧ್ಯಕ್ಷ ಧರಂಬೀರ್ ಗೋಖೂಲ್ ಅವರು ಐದು ದಿನಗಳ ಅಧಿಕೃತ ಭಾರತ ಭೇಟಿಗಾಗಿ ನಿನ್ನೆ ಆಂಧ್ರಪ್ರದೇಶಕ್ಕೆ ಆಗಮಿಸಿದ್ದಾರೆ. ಅವರು ಇಂದು ಗುಂಟೂರಿನಲ್ಲಿ ನಡೆಯಲಿರುವ ೩ ನೇ ವಿಶ್ವ ತೆಲುಗು ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

<>><><*><><<>

ಮತದಾರರ ಸೇವೆಗಳು ಮತ್ತು ಚುನಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಏಕೀಕೃತ ಡಿಜಿಟಲ್ ವೇದಿಕೆಯಾದ ಇಸಿಐ ನೆಟ್ ಅಪ್ಲಿಕೇಶನ್ ಅನ್ನು ಸುಧಾರಿಸಲು ಸಲಹೆಗಳನ್ನು ಸಲ್ಲಿಸಲು ಭಾರತೀಯ ಚುನಾವಣಾ ಆಯೋಗ ನಾಗರಿಕರನ್ನು ಆಹ್ವಾನಿಸಿದೆ. ಇದೇ ೧೦ ರವರೆಗೆ ಇಸಿಐ ನೆಟ್ ಅಪ್ಲಿಕೇಶನ್‌ನಲ್ಲಿ 'ಸಲಹೆಯನ್ನು ಸಲ್ಲಿಸಿ' ಟ್ಯಾಬ್ ಮೂಲಕ ನಾಗರಿಕರು ತಮ್ಮ ಪ್ರತಿಕ್ರಿಯೆಯನ್ನು ಹಂಚಿಕೊಳ್ಳಬಹುದು. ಚುನಾವಣಾ ಆಯೋಗದ ಪ್ರಕಾರ, ಇಸಿಐ ನೆಟ್ ಅಪ್ಲಿಕೇಶನ್‌ನ ಪ್ರಾಯೋಗಿಕ ಆವೃತ್ತಿಯು ಸುಧಾರಿತ ಮತದಾರರ ಸೇವೆಗಳು, ಮತದಾನದ ಶೇಕಡಾವಾರು ಪ್ರವೃತ್ತಿಗಳ ತ್ವರಿತ ಲಭ್ಯತೆ ಮತ್ತು ಮತದಾನ ಮುಗಿದ ೭೨ ಗಂಟೆಗಳ ಒಳಗೆ ಸೂಚ್ಯಂಕ ಕಾರ್ಡ್‌ಗಳ ಪ್ರಕಟಣೆಯನ್ನು ನೀಡುತ್ತದೆ - ಈ ಹಿಂದೆ ಹಲವಾರು ವಾರಗಳು ಅಥವಾ ತಿಂಗಳುಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಬಿಹಾರ ವಿಧಾನಸಭಾ ಚುನಾವಣೆಗಳು ೨೦೨೫ ಮತ್ತು ನಂತರದ ಉಪ ಚುನಾವಣೆಗಳ ಸಮಯದಲ್ಲಿ ಅಪ್ಲಿಕೇಶನ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಲಾಯಿತು. ಬಳಕೆದಾರರ ಅನುಭವವನ್ನು ಮತ್ತಷ್ಟು ಹೆಚ್ಚಿಸಲು ನಾಗರಿಕರಿಂದ ಸ್ವೀಕರಿಸಿದ ಸಲಹೆಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಸಂಯೋಜಿಸಲಾಗುತ್ತದೆ ಎಂದು ಆಯೋಗ ತಿಳಿಸಿದೆ.

<>><><*><><<>

ಪ್ರಧಾನಿ ನರೇಂದ್ರ ಮೋದಿ ಇಂದು ೭೨ನೇ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿಯನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಉದ್ಘಾಟಿಸಲಿದ್ದಾರೆ. ಈ ಪಂದ್ಯಾವಳಿ ಇಂದಿನಿಂದ ಇದೇ ೧೧ ರವರೆಗೆ ವಾರಣಾಸಿಯ ಡಾ.ಸಂಪೂರ್ಣಾನಂದ್ ಕ್ರೀಡಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ದೇಶಾದ್ಯಂತ ರಾಜ್ಯಗಳು ಮತ್ತು ಸಂಸ್ಥೆಗಳಿಂದ ೧ ಸಾವಿರಕ್ಕೂ ಹೆಚ್ಚು ಆಟಗಾರರನ್ನು ಒಳಗೊಂಡ ಸುಮಾರು ೭೩ ಪುರುಷ ಮತ್ತು ಮಹಿಳಾ ತಂಡಗಳು

ಭಾಗವಹಿಸಲಿವೆ.  ಇದೇ ಮೊದಲ ಬಾರಿಗೆ ಈ ಪ್ರಮಾಣದ ರಾಷ್ಟ್ರೀಯ ಮಟ್ಟದ ವಾಲಿಬಾಲ್ ಚಾಂಪಿಯನ್‌ಶಿಪ್ ಅನ್ನು ಪೂರ್ವಾಂಚಲ್ ಆಯೋಜಿಸುತ್ತಿದೆ.

<>><><*><><<>

ವಡೋದರಾದಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ೨೦೨೪ ಟೇಬಲ್ ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಸಿಂಡ್ರೆಲಾ ದಾಸ್ ಮತ್ತು ರೂಪಮ್ ಸರ್ದಾರ್ ಅವರು ೧೭ವರ್ಷದೊಳಗಿನ ಬಾಲಕಿಯರ ಮತ್ತು ೧೭ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದುಕೊಂಡರು. ದಿವಿಜಾ ಪಾಲ್ ಮತ್ತು ದೇವ್ ಪ್ರಣವ್ ಭಟ್ ೧೩ ವರ್ಷದೊಳಗಿನ ಬಾಲಕಿಯರ ಮತ್ತು ಬಾಲಕರ ಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದಾರೆ. ೧೫ ವರ್ಷ ವಯೋಮಿತಿಯ ಮಿಶ್ರ ಡಬಲ್ಸ್‌ನಲ್ಲಿ ವಿವಾನ್ ಡೇವ್ ಮತ್ತು ನೈಶಾ ರೇವಾಸ್ಕರ್ ಅವರು  ನಿನ್ನೆ ನಡೆದ ಪಂದ್ಯದಲ್ಲಿ ಅಗ್ರ ಶ್ರೇಯಾಂಕಿತರಾದ ಆದಿತ್ಯ ದಾಸ್ ಮತ್ತು ಅಂಕೋಲಿಕಾ ಚಕ್ರವರ್ತಿ ಅವರನ್ನು ಸೋಲಿಸಿ, ಫೈನಲ್ ತಲುಪಿದ್ದಾರೆ. ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ವಡೋದರಾದಲ್ಲಿ ನಡೆಯುತ್ತಿರುವುದು ಇದು ಎರಡನೇ ವರ್ಷವಾಗಿದ್ದು, ಒಟ್ಟು ೨೨೪ ಆಟಗಾರರನ್ನು ಒಳಗೊಂಡ ೧೧ ರಿಂದ ೧೯ ವರ್ಷ ವಯೋಮಿತಿಯ ವಿಭಾಗಗಳವರೆಗಿನ ಸ್ಪರ್ಧೆಗಳನ್ನು ನಡೆಸಲಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ  ><><<>